ರಸ್ತೆಯ ಭಾಗವು ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿದ್ದು ಈ ಭಾಗದ ರಸ್ತೆಯನ್ನು ಮೇಲ್ದರ್ಜೆಗೇರಿಸುವಂತೆ ಸಾರ್ವಜನಿಕರಿಂದ ಮನವಿ ಬಂದಿಲ್ಲ.

ಅ) ಈ ರಸ್ತೆಯು ಜಿಲ್ಲಾಪರಿಷತ್ ವ್ಯಾಪ್ತಿಯಲ್ಲಿದ್ದು ಜಿಲ್ಲಾ ಪರಿಷತ್ತಿನವರು ದುರಸ್ತಿ ಮಾಡಿಸುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆ.

ಟಿ. ನರಸೀಪುರ ಕ್ಷೇತ್ರದ ರಸ್ತೆಗಳ ದುರಸ್ತಿ

1668: ಶ್ರೀ ಎಂ. ಶ್ರೀನಿವಾಸಯ್ಯ (ಟಿ. ನರಸೀಪುರ):– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಟಿ. ನರಸೀಪುರ ಕ್ಷೇತ್ರಕ್ಕೆ ಸೇರಿದ ಮೂಗೂರುನಿಂದ ಟಿ. ನರಸೀಪುರಕ್ಕೆ ಹಾಗೂ ಮೂಗೂರುನಿಂದ ಕೊಳ್ಳಗಾಲ ಹಾಗೂ ಸಂತೇಮಾರಹಳ್ಳಿವರೆವಿಗೂ ಲೋಕೋಪಯೋಗಿ ಇಲಾಖೆಗೆ ಸೇರಿದ್ದು ರಸ್ತೆ ಬಹಳ ದುಸ್ಥಿತಿಯಲ್ಲಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಆ ರಸ್ತೆಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ದುರಸ್ತಿಗೊಳಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ) ಬಂದಿದೆ.

ಆ) ಈ ರಸ್ತೆಯ ಅತಿ ಕೆಟ್ಟು ಹೋದ ಭಾಗಗಳನ್ನು (3.15 ಕಿಮೀ.) ದುರಸ್ತಿಪಡಿಸುವ ಕಾಮಗಾರಿ ಪ್ರಗತಿಯಲ್ಲಿದ್ದು ಸಂಚಾರಕ್ಕೆ ತೊಂದರೆ ಆಗದಂತೆ ನೋಡಿಕೊಳ್ಳಲಾಗುತ್ತದೆ.

ಟಿ. ನರಸೀಪುರದಿಂದ ನಂಜನಗೂಡಿನವರೆಗೆ ರಸ್ತೆ ದುರಸ್ತಿ ಕಾರ್ಯ

1669: ಶ್ರೀ ಎಂ. ಶ್ರೀನಿವಾಸಯ್ಯ (ಟಿ. ನರಸೀಪುರ):– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಟಿ. ನರಸೀಪುರದಿಂದ ನಂಜನಗೂಡಿನವರೆಗೆ ರಸ್ತೆಯು ದುಸ್ಥಿತಿಯಲ್ಲಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಇದನ್ನು ದುರಸ್ತಿ ಮಾಡಲು ತೆಗೆದುಕೊಂಡಿರುವ ಕ್ರಮವೇನು ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ) ಬಂದಿದೆ.

ಆ) ಈ ರಸ್ತೆಯ ಅತಿಕೆಟ್ಟು ಹೋದ ಭಾಗಗಳ ದುರಸ್ಥಿಯನ್ನು ಮಾಡಲಾಗುತ್ತಿದೆ. ಹಾಗೂ 6ನೇ ಕಿ.ಮೀ ನಿಂದ 8ನೇ ಕಿ.ಮೀವರೆವಿಗೆ ರಸ್ತೆಯನ್ನು ಡಾಂಬರೀಕರಿಸಲಾಗುತ್ತಿದೆ. ಲಭ್ಯವಿರುವ ನಿರ್ವಹಣ ಅನುದಾನದಿಂದ ಈ ರಸ್ತೆಯನ್ನು ಅದಷ್ಟು ಮಟ್ಟಿಗೆ ಸುಸ್ಥಿತಿಯಲ್ಲಿಡಲಾಗುತ್ತಿದೆ.

ಹಿರೇಕೆರೂರು ತಾಲ್ಲೂಕು ಮದಗ – ಮಾಸೂರು ನೀರಾವರಿ ಕೆರೆ ಅಭಿವೃದ್ಧಿ

1670: ಶ್ರೀ ಬಿ.ಹೆಚ್. ಬನ್ನಿಕೋಡ (ಹಿರೇಕೆರೂರು):– ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?